ಇ) ಶಿಗ್ಗಾಂವ ತಾಲ್ಲೂಕಿನ ನಾರಾಯಣಪೂರ ದೊಡ್ಡ ಪ್ರಮಾಣದ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರ ಸಂಘವು ಹೊಂದಿರುವ ಲಾಭವೆಷ್ಟು ?

ಈ) 1987–90 ರಲ್ಲಿ ಸದರೀ ಸಂಘದ ಬಂಡವಾಳ ಮತ್ತು ಲಾಭವೆಷ್ಟು ?

ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು) :–

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 170 ದೊಡ್ಡ ಪ್ರಮಾಣದ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರ ಸಂಘಗಳು ಇರುತ್ತವೆ.

ಆ) 17 ಸಹಕಾರ ಸಂಘಗಳು ಲಾಭದಾಯಕದಲ್ಲಿದ್ದು ಅವುಗಳ ಒಟ್ಟು ಲಾಭ ರೂ. 8,43,136-01 ಇರುತ್ತದೆ.

ಇ) ಶಿಗ್ಗಾಂವ ತಾಲೂಕಿನಲ್ಲಿ ನಾರಾಯಣಪುರ ದೊಡ್ಡ ಪ್ರಮಾಣದ ಪ್ರಾಥಮಿಕ ಪತ್ತಿನ ಸಹಕಾರ ಸಂಘವು ದಿನಾಂಕ 31–3–1990ಕ್ಕೆ ರೂ. 86,866–56 ಲಾಭ ಹೊಂದಿರುತ್ತದೆ.

ಈ) ಸದರೀ ಸಂಘದ ಬಂಡವಾಳ ಮತ್ತು ಲಾಭ ಈ ಕೆಳಗಿನಂತೆ ಇರುತ್ತದೆ.

		87–88	88–89	89–90
1)	ಬಂಡವಾಳ	39,34,300	41,98,500–00	42,76,997–00
2)	ಲಾಭ	1,81,955–14	1,57,198–70	86,866–54

ವಿಷಯ : ಹರಪನಹಳ್ಳಿ ತಾಲ್ಲೂಕಿನಲ್ಲಿ ತೀವ್ರ ಅಭಾವ ಪರಿಸ್ಥಿತಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 417 (723)

ಶ್ರೀ ಬಿ.ಹೆಚ್. ಯಂಕನಾಯಕ್ (ಹರಪನಹಳ್ಳಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಗ್ರಾಮಗಳ ಮತ್ತು ತಾಂಡೆಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ನೀರಿನ ಅಭಾವದಿಂದ ಬಳಲುತ್ತಿರುವ ಗ್ರಾಮಗಳ ಹಾಗೂ ತಾಂಡೆಗಳ ಸಂಖ್ಯೆ ಎಷ್ಟು ?

ಇ) ಹಾಗಿದ್ದಲ್ಲಿ ಸರಕಾರ ಈ ಬಗ್ಗೆ ತಕ್ಷಣ ತೆಗೆದುಕೊಳ್ಳುವ ಕ್ರಮಗಳಾವುವು ಮತ್ತು ಶಾಶ್ವತ ಕ್ರಮಗಳು ಯಾವುವು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

ಅ) ಗ್ರಾಮಗಳು 224 ತಾಂಡೆಗಳು 42

ಆ) ಗ್ರಾಮಗಳು 5 ತಾಂಡೆಗಳು 4

ಇ) ಅಭಾವ ಪರಿಹಾರ ಕಾಮಗಾರಿ ಅಡಿಯಲ್ಲಿ 4 ಗ್ರಾಮಗಳಲ್ಲಿ ಫಲಪ್ರದವಾದ ಕೊಳವೆ ಬಾವಿಗಳನ್ನು ಕೊರೆದಿದ್ದು ಅವುಗಳಿಗೆ ಕೈಪಂಪು ಅಳವಡಿಸಲಾಗುತ್ತಿದೆ. ಉಳಿದ ತಾಂಡ/ಗ್ರಾಮಗಳಿಗೆ ಕಿರುನೀರು ಸರಬರಾಜು ಯೋಜನೆಗಳ ಅಥವಾ ಕೊಳವೆ ಬಾವಿಗಳ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ

ವಿಷಯ :– ನೀಲಗಿರಿ ಮರಗಳನ್ನು ಕಟಾವು ಮಾಡುವ ಬಗ್ಗೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 419 (704)

ಶ್ರೀ ಆರ್. ನಾರಾಯಣ (ಬೆಳ್ಳಾವಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಬೆಳೆಸಿದ (ಡಿಆರ್‌ಡಿಎಸ್) ನೀಲಗಿರಿ ಮರಗಳು ಕಟಾವಿಗೆ ಬಂದಿದ್ದು ಅವುಗಳನ್ನು ಅನಧಿಕೃತವಾಗಿ ಕಟಾವು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಇ) ಕಟಾವಿಗೆ ಬಂದಿರುವ ಮರಗಳ ಮೌಲ್ಯವೆಷ್ಟು ?